

بسم اللهِ الرّحمٰنِ الرّحیم

# ಮುಸ್ಲಿಹ್ ಮೌಊದ್ ಭವಿಷ್ಯವಾಣಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19-02-2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಫೆಬ್ರವರಿ 20ರ ದಿನದಂದು ಜಮಾಅತಿನಲ್ಲಿ ಮುಸ್ಲಿಹ್ ಮೌಊದ್‌ರ ಬಗ್ಗೆಗಿನ ಭವಿಷ್ಯವಾಣಿಯನ್ನು ಸ್ಮರಿಸಲಾಗುತ್ತದೆ. ಅದೊಂದು ದೀರ್ಘವಾದ ಭವಿಷ್ಯವಾಣಿಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರಿಗೆ ಅವರ ಪುತ್ರನ ಬಗ್ಗೆ ಅಲ್ಲಾಹನು ಹೇಳಿರುವ ಹಲವಾರು ವಿಶೇಷತೆಗಳು ಅದರಲ್ಲಿ ಹೇಳಲಾಗಿವೆ. ಇಂದು ನಾನು ಆ ಭವಿಷ್ಯವಾಣಿಯ ಒಂದು ಮಗ್ಗುಲಾದ **"ಅವರು ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ತುಂಬಿಸಲ್ಪಡುವರು"** ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರ ಸ್ವಂತ ಲಿಖಿತಗಳ ಮತ್ತು ಭಾಷಣಗಳ ಆಧಾರದಲ್ಲಿ ಕೆಲವು ವಿವರಣೆಗಳನ್ನು ನೀಡುವೆನು.

ಹಝ್ರತ್ ಮುಸ್ಲಿಹ್ ಮೌಊದ್(ರ) ಏಕದೇವ ವಿಶ್ವಾಸದ ವಿಷಯದಲ್ಲಿ 17ನೇ ವಯಸ್ಸಿನಲ್ಲಿ ಒಂದು ಜಲ್ಸದಲ್ಲಿ ಒಂದು ಭಾಷಣವನ್ನು ನೀಡಿದ್ದರು. **'ಪೂರ್ಣವಾಗಿಯೂ ಹೊಸ ಅಂಶಗಳನ್ನು ಹೇಳಲಾಗಿದೆ'** ಎಂದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಸಹ ಆ ಭಾಷಣದ ಬಗ್ಗೆ ಶ್ಲಾಘಿಸಿ ಹೇಳಿದ್ದರು.

ಮಾರ್ಚ್ 1907ರಲ್ಲಿ, ಅವರಿಗೆ ಕೇವಲ 18 ವರ್ಷ ಪ್ರಾಯವಿದ್ದಾಗ, **'ದೇವಪ್ರೇಮ'** ಎಂಬ ಶೀರ್ಷಿಕೆಯಲ್ಲಿ ಒಂದು ಮಹತ್ತಾದ ಪ್ರಬಂಧವನ್ನು ಬರೆದರು. ಅನಂತರ ಅದನ್ನು ಪುಸ್ತಕ ರೂಪದಲ್ಲೂ ಪ್ರಕಾಶಿಸಲಾಯಿತು. ಯಾವ ರೀತಿಯಲ್ಲಿ ಅಲ್ಲಾಹನು ಅವರನ್ನು ಸಣ್ಣ ವಯಸ್ಸಿನಲ್ಲೇ ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ತುಂಬಿಸಲು ಶುರುಮಾಡಿದ್ದನು ಎಂದು ಆ ಬರಹದಿಂದಲೇ ಪ್ರಕಟವಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಅದರಲ್ಲಿ ಬರೆಯುತ್ತಾರೆ: ಅಲ್ಲಾಹನು ಮನುಷ್ಯನನ್ನು ಪ್ರೇಮಿಸಲಿಕ್ಕಾಗಿಯೇ ಸೃಷ್ಟಿಸಿದ್ದಾನೆ. ಅಲ್ಲಾಹನ ಪ್ರೇಮದಿಂದ ಆವರಿಸಲ್ಪಡಬೇಕೆಂಬ ಮತ್ತು ಸ್ಥಾಯಿಯಾದ ಜೀವನ ನೀಡುವ ಆ ಸಮುದ್ರದಲ್ಲಿ ಸದಾ ಮುಳುಗಿರಬೇಕೆಂಬ ಉದ್ದೇಶದಿಂದಲೇ ಅವನನ್ನು ಸೃಷ್ಟಿಸಲಾಗಿದೆ. ಈ ಪ್ರೇಮದ ಕಾರಣದಿಂದಲೇ ಮನುಷ್ಯನು ಪಾಪಗಳಿಂದ ರಕ್ಷಣೆ ಪಡೆಯುತ್ತಾನೆ ಮತ್ತು ಉನ್ನತ ಪದವಿಗಳನ್ನು ಪಡೆಯುತ್ತಾನೆ. ಈ ಪ್ರೇಮವೇ ಅಲ್ಲಾಹನನ್ನು ಅರಿಯಲು ಕಾರಣವಾಗುತ್ತದೆ. ಪ್ರೇಮದ ವಿನಾ ಮನುಷ್ಯನಿಗೆ ಅಲ್ಲಾಹನ ನೈಜತೆ ಮತ್ತು ಅವನ ಸರಿಯಾದ ಅರಿವು ಲಭಿಸಲು ಸಾಧ್ಯವಲ್ಲ.

ಅದರ ಕೊನೆಯಲ್ಲಿ ಅವರು ಇಸ್ಲಾಮ್ ಮುಂದಿರಿಸುವ ಜೀವಂತ ದೇವನಿಗೆ ಪುರಾವೆಯಾಗಿ ಹೀಗೆ ಹೇಳಿದರು: ಇಸ್ಲಾಮಿನ ದೇವನು ಮಾತ್ರ ದಿವ್ಯವಾಣಿ ಮೂಲಕ, ಹಿಂದಿನ ಕಾಲದಲ್ಲಿ ಎಂಬಂತೆ ಇಂದು ಸಹ ಮನುಷ್ಯನ ಮಾರ್ಗದರ್ಶನ ಮಾಡುತ್ತಾನೆ. ಇದೇ ಜೀವಂತ ದೇವನ ಅತ್ಯಂತ ಹಿರಿದಾದ ವಿಶೇಷತೆಯಾಗಿದೆ. ಅವರು ಬರೆಯುತ್ತಾರೆ: ನಾನು ದೇವಪ್ರೇಮ ಎಂಬ ಪದದ ಬಗ್ಗೆ ಎಷ್ಟು ಯೋಚಿಸುತ್ತೇನೋ ಅಷ್ಟೇ ಹೆಚ್ಚು ಒಂದು ವಿಶೇಷವಾದ ಅನುಭೂತಿ ಮತ್ತು ಆನಂದ ಹೃದಯದಲ್ಲಿ ಉಂಟಾಗುತ್ತದೆ. ನಮ್ಮ ಹೃದಯವನ್ನು ಪ್ರಕಾಶಿತಗೊಳಿಸುವ ಮತ್ತು ನಮ್ಮ ಮಿದುಳನ್ನು ಬೆಳಗಿಸುವ ಸನ್ಮಾರ್ಗದ ಕಡೆಗೆ ಕೊಂಡೊಯ್ಯುವಂತಹ ಅನುಗ್ರಹವನ್ನು ನೀಡಿದ ಇಸ್ಲಾಂ ಎಷ್ಟು ಸುಂದರವಾದ ಧರ್ಮವಾಗಿದೆ. ಇಸ್ಲಾಮಿನ ಅಧ್ಯಾಪನೆಗಳು ನಮ್ಮ ಗಾಯಗೊಂಡ ಹೃದಯಗಳಿಗೆ ಒಂದು ಲೇಪನವಾಗಿದೆ. ಅಲ್ಲಾಹನಾಣೆ ಇಸ್ಲಾಂ ಇಲ್ಲದಿರುತ್ತಿದ್ದರೆ, ಸತ್ಯಾನ್ವೇಷಿ ಜೀವಚ್ಛವವಾಗುತ್ತಿದ್ದನು. ಸ್ನೇಹದ ಆಸಕ್ತಿಯಿರುವವನ ಸೊಂಟ ಮುರಿದುಹೋಗುತ್ತಿತ್ತು. ತಾನು ಯಾರನ್ನು ಪ್ರೀತಿಸುತ್ತಿರುವನೋ ಅವನು ಕಣಕಣವನ್ನು ನೋಡುತ್ತಾನೆ, ಹೃದಯಗಳ ಸಂಗತಿಗಳನ್ನು ಅರಿಯುತ್ತಾನೆ, ಅವನು ಕೇಳುತ್ತಾನೆ, ಮಾತನಾಡುತ್ತಾನೆ ಮತ್ತು ಅವನನ್ನು ಪ್ರೀತಿಸುವವನಿಗೆ ಪ್ರತಿಫಲವನ್ನೂ ನೀಡುತ್ತಾನೆ ಎಂದು ದೇವನನ್ನು ಪ್ರೀತಿಸುವ ಒಬ್ಬ ವ್ಯಕ್ತಿ ಕಾಣುವಾಗ, ಅವನ ಹೃದಯವು ಆ ಪ್ರೇಮದ ಕಾರಣದಿಂದ ಖುಶಿಪಡುತ್ತದೆ ಮತ್ತು ವಿಶೇಷವಾದ ಪರಮಾನಂದವನ್ನು ಅನುಭವಿಸುತ್ತದೆ.

1908ರ ಜಲ್ಸದಲ್ಲಿ, ಡಿಸೆಂಬರ್ 28ರಂದು ಹಝ್ರತ್ ಮುಸ್ಲಿಹ್ ಮೌಊದ್(ರ) **"ನಾವು ಹೇಗೆ ಯಶಸ್ಸು ಗಳಿಸಬಹುದು"** ಎಂಬ ಶೀರ್ಷಿಕೆಯಲ್ಲಿ ಒಂದು ಮುಖ್ಯವಾದ ಭಾಷಣವನ್ನು ಮಾಡಿದ್ದರು. ಆ ವಿಷಯದಲ್ಲಿನ ಅನಿಸಿಕೆಗಳು 19 ವಯಸ್ಸಿನ ಒಬ್ಬ ಯುವಕನದ್ದಾಗಿತ್ತು. ಅವರು ಹೇಳುತ್ತಾರೆ: ಅಲ್ಲಾಹನು ಮನುಷ್ಯನನ್ನು ಏಕೆ ಸೃಷ್ಟಿಸಿದ್ದಾನೆಂದು ಪ್ರತಿಯೊಬ್ಬ ವ್ಯಕ್ತಿ ಯೋಚಿಸಬೇಕು. ಮರಣವೆಂಬುದು ಸುನಿಶ್ಚಿತವಾಗಿರುವಾಗ, ಮರಣದ ನಂತರ ಏನಾಗುವುದು ಎಂದು ಯೋಚಿಸಬೇಕು. ಕೇವಲ ಕೆಲವು ದಿನಗಳ ಇಹಲೋಕ ಜೀವಿತಕ್ಕಾಗಿ ಮನುಷ್ಯನು ಇಷ್ಟೆಲ್ಲ ಪ್ರಯತ್ನಗಳನ್ನು ಮತ್ತು ಯೋಜನೆಗಳನ್ನು ಮಾಡುತ್ತಿರುವಾಗ, ಅನಂತವಾದ ಪರಲೋಕ ಜೀವಿತಕ್ಕಾಗಿ ಯಾವುದೇ ಪ್ರಯತ್ನ ಮತ್ತು ಯೋಜನೆಯ ಆವಶ್ಯಕತೆಯಿಲ್ಲವೇ? ಅದಕ್ಕಾಗಿ ನಾವು ಏನಾದರೂ ತಯಾರಿ

ಮಾಡಬೇಡವೇ? ಪವಿತ್ರ ಖುರ್‌ಆನಿನ ಶಿಕ್ಷಣದ ಬೆಳಕಿನಲ್ಲಿ ವಿವರಿಸುತ್ತಾ ಅವರು ಹೇಳುತ್ತಾರೆ: ಮನುಷ್ಯನು ಸಣ್ಣದಾದ ಒಂದು ವ್ಯಾಪಾರ ಮಾಡುವಾಗಲೂ ಬಹಳ ಎಚ್ಚರಿಕೆ ವಹಿಸುತ್ತಾನೆ. ಪ್ರಯೋಜನಕಾರಿ ಮತ್ತು ಲಾಭದಾಯಕವಾದುದನ್ನು ಮಾತ್ರ ಯಾವಾಗಲೂ ಖರೀದಿ ಮಾಡುತ್ತಾನೆ. ಹೀಗಿರುವಾಗ, ಲಕ್ಷಗಟ್ಟಲೆ ಅಥವಾ ಕೋಟಿಗಟ್ಟಲೆ ಯಾ ಅಪರಿಮಿತವಾದ ಲಾಭ ಸಿಗುವ ವ್ಯಾಪಾರವನ್ನು ಮಾಡದೇ ಇರುವುದು ಎಷ್ಟು ದುಃಖಕರವಾದ ಸಂಗತಿಯಾಗಿದೆ.

ಅನಂತರ ಅವರ ಖಿಲಾಫತಿನ ಎರಡನೇ ವರ್ಷವಾದ 1916ರ ಜಲ್ಸದಲ್ಲಿ ಅವರು **"ದೇವಸ್ಮರಣೆ"** (ಧಿಕ್‌ರೆ ಇಲಾಹಿ) ಎಂಬ ವಿಷಯದಲ್ಲಿ ಭಾಷಣ ಮಾಡಿದರು. ಅದರಲ್ಲಿ ಅವರು ಅತುಲ್ಯವಾದ ಮನಮೋಹಕ ಶೈಲಿಯಲ್ಲಿ ದೇವಸ್ಮರಣೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸುತ್ತಾ ದೇವಸ್ಮರಣೆ ಎಂದರೇನು, ಅದರ ಆವಶ್ಯಕತೆ, ಅದರ ವಿಧಗಳು ಮತ್ತು ಅದರ ಪ್ರಯೋಜನಗಳ ಮೇಲೆ ಬೆಳಕು ಬೀರಿದರು. ಅವರು ಹೇಳಿದರು: ಸ್ಮರಣೆ ಎಂಬುದು ನಾಲ್ಕು ರೀತಿಯದ್ದಾಗಿದೆ. ಮೊದಲ ಸ್ಮರಣೆಯ ರೀತಿ ನಮಾಝ್ ಆಗಿದೆ. ಎರಡನೆಯದು ಪವಿತ್ರ ಖುರ್‌ಆನಿನ ಪಾರಾಯಣ, ಮೂರನೆಯದು ಅತ್ಯುನ್ನತನಾದ ಅಲ್ಲಾಹನ ಗುಣವೈಶಿಷ್ಟ್ಯಗಳನ್ನು ಹೇಳುವುದು. ನಾಲ್ಕನೆಯದು ಅಲ್ಲಾಹನ ಗುಣವೈಶಿಷ್ಟ್ಯಗಳನ್ನು ಏಕಾಂತದಲ್ಲಿ ಮತ್ತು ಏಕಾಂಗಿಯಾಗಿ ಸ್ಮರಿಸುವುದು ಹಾಗೂ ಅದರ ಬಗ್ಗೆ ಚಿಂತಿಸುವುದು. ದೇವಸ್ಮರಣೆ ಸ್ವೀಕೃತಗೊಳ್ಳುವ ವಿಶೇಷವಾದ ಸಮಯಗಳನ್ನು ಸಹ ಹಝ್ರತ್ ಮುಸ್ಲಿಹ್ ಮೌಊದ್(ರ) ಅದರಲ್ಲಿ ಜನರಿಗೆ ಹೇಳಿಕೊಟ್ಟರು. ತಹಜ್ಜುದ್ ನಮಾಝನ್ನು ನಿಯತವಾಗಿ ಅನುಷ್ಠಿಸಲು ತಾಕೀತು ಮಾಡಿದರು ಮತ್ತು ತಹಜ್ಜುದ್ ನಮಾಝನ್ನು ಕರಾರುವಾಕ್ಕಾಗಿ ಪಾಲಿಸುತ್ತಾ ಬರಲು ಡಜನ್‌ಗಟ್ಟಲೆ ಮಾರ್ಗಗಳನ್ನು ಸಹ ತಿಳಿಸಿಕೊಟ್ಟರು.

9-10-1917ರಂದು ಪಟಿಯಾಲದಲ್ಲಿ, **"ಅಲ್ಲಾಹನ ಪರಿಪಾಲನೆ ಮಾಡುವ ಗುಣವು ಪ್ರಪಂಚದ ಪ್ರತಿಯೊಂದು ವಸ್ತುವನ್ನು ಆವರಿಸಿದೆ"** ಎಂಬ ವಿಷಯದಲ್ಲಿ ಅವರು ಒಂದು ಭಾಷಣವನ್ನು ಮಾಡಿದರು. ಅಲ್ಲಾಹನ ಅಸ್ತಿತ್ವ, ಇಸ್ಲಾಂ ಮತ್ತು ಪವಿತ್ರ ಖುರ್‌ಆನಿನ ಸತ್ಯತೆ, ಹಝ್ರತ್ ಮಸೀಹ್ ಮೌಊದ್‌ರ ಸತ್ಯತೆ ಇವುಗಳನ್ನು ಅಲ್ಲಾಹನ ಪರಿಪಾಲನೆ ಎಂಬ ಗುಣವಿಶೇಷದ ಆಧಾರದಲ್ಲಿ ಸಾಬೀತುಗೊಳಿಸಿದರು. ಅವರು ಹೇಳಿದರು: ಅಲ್ಲಾಹನ ಗುಣವಿಶೇಷತೆಗಳು ಅವನ ಅಸ್ತಿತ್ವದ ಪುರಾವೆಯಾಗಿವೆ. ದೇವನ ಗುಣವೈಶಿಷ್ಟ್ಯಗಳ ಕುರಿತು ಯೋಚಿಸುವುದರಿಂದ ಮತ್ತು ಆ ಶಕ್ತವಾದ ಶಕ್ತಿಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದರಿಂದ ಅವುಗಳು ಸದಾ ಪ್ರಕಟವಾಗುತ್ತಿವೆ ಎಂದು ಗೊತ್ತಾಗುವುದು. ಖಂಡಿತವಾಗಿಯೂ ಅತ್ಯಂತ ಶಕ್ತನಾದ, ಸರ್ವಜ್ಞಾನಿಯಾದ, ವಿವೇಕವಂತನಾದ, ಕಾರುಣ್ಯವಂತನೂ ದಯಾವಂತನೂ ಆದ ಒಬ್ಬ ದೇವನು ಇದ್ದಾನೆ ಎಂದು ಅಂಗೀಕರಿಸಬೇಕಾಗುವುದು.

ಅವರ ಇನ್ನೊಂದು ಉಪನ್ಯಾಸ **"ಇಸ್ಲಾಮಿನಲ್ಲಿ ಬಿರುಕಿನ ಆರಂಭ"** (ಇಸ್ಲಾಂ ಮೇ ಇಖ್ತಿಲಾಫಾತ್‌ಕೇ ಆಗ್ಗಾಝ್) ಎಂಬುದಾಗಿತ್ತು. ಅವರು 1919ರಲ್ಲಿ ಮಾರ್ಡನ್ ಹಿಸ್ಟಾರಿಕಲ್ ಸೊಸೈಟಿಯ ಒಂದು ಸಭೆಯನ್ನು ಸಂಬೋಧಿಸುತ್ತಾ ಇಸ್ಲಾಮಿಯಾ ಕಾಲೇಜ್ ಲಾಹೋರಿನಲ್ಲಿ ಈ ಭಾಷಣವನ್ನು ನೀಡಿದ್ದರು. ಅವರು ಹೇಳಿದರು: ಇಸ್ಲಾಮಿನಲ್ಲಿ ಭಿನ್ನತೆಯ ಆರಂಭ ಹಝ್ರತ್ ಪೈಗಂಬರ್(ಸ)ರ ನಿಧನದ 15 ವರ್ಷಗಳ ನಂತರ ಉಂಟಾಗಿತ್ತು. ಇಸ್ಲಾಮಿನಲ್ಲಿ ಗಲಭೆಗೆ ಕಾರಣಕರ್ತರು ಕೆಲವು ಹಿರಿಯ ಸಹಾಬರು ಆಗಿದ್ದರು ಎಂಬ ಭಾವನೆ ತಪ್ಪು. ಈ ಉಪನ್ಯಾಸದಲ್ಲಿ ಹಝ್ರತ್ ಉಸ್ಮಾನ್(ರ)ರ ಆರಂಭ ಕಾಲದ ಜೀವಿತ, ಹಝ್ರತ್ ಪೈಗಂಬರ್(ಸ)ರ ದೃಷ್ಟಿಯಲ್ಲಿ ಹಝ್ರತ್ ಉಸ್ಮಾನ್(ರ)ರ ಪದವಿ, ಈ ಪಿತೂರಿ ಎಲ್ಲಿಂದ ಉದ್ಭವಿಸಿತು ಎಂಬುದರ ಬಗ್ಗೆಯೆಲ್ಲಾ ಅವರು ವಿವರಿಸಿದರು. ಸಹಾಬರ ಬಗ್ಗೆ ತಪ್ಪುಭಾವನೆ ಇರಿಸುವುದು ಅನಾವಶ್ಯಕ ಎಂದು ಹೇಳುತ್ತಾ ಪಿತೂರಿಯ ಹೇತು ಮತ್ತು ಅದು ಹಝ್ರತ್ ಉಸ್ಮಾನ್‌ರ ಕಾಲದಲ್ಲಿ ಆರಂಭವಾಗಲಿಕ್ಕಿರುವ ಕಾರಣಗಳನ್ನು ಅವರು ವಿವರಿಸಿದರು. ಪಿತೂರಿಯ ಕಾರಣೀಭೂತನಾದ ಅಬ್ದುಲ್ಲಾಹ್ ಬಿನ್ ಸಬಾ ಎಂಬವನ ಸ್ಥಿತಿಗತಿಗಳು ಮತ್ತು ಕೂಫ, ಬಸ್ರ ಮತ್ತು ಸಿರಿಯದಲ್ಲಿ ಆ ಕಾಲದಲ್ಲಿ ನೆಲೆಸಿದ್ದ ಮುಸ್ಲಿಮರ ಸಾಮಾನ್ಯ ಮನಃಸ್ಥಿತಿಯ ಬಗ್ಗೆ ಬೆಳಕುಬೀರಿದರು.

ಈ ಉಪನ್ಯಾಸವನ್ನು ಮೊದಲ ಬಾರಿ ಗ್ರಂಥರೂಪದಲ್ಲಿ ಪ್ರಕಟಿಸಲಾದಾಗ, ಲಾಹೋರಿನ ಇಸ್ಲಾಮಿಯ್ಯ ಕಾಲೇಜಿನ ಪ್ರೊಫೆಸರ್ ಆದ ಸಯ್ಯದ್ ಅಬ್ದುಲ್‌ಖಾದಿರ್ ಸಾಹಿಬ್ ಎಂ.ಎ. ಹೀಗೆ ಬರೆದರು: ಈ ಭಾಷಣ ಅತ್ಯಂತ ಜ್ಞಾನಭರಿತವಾಗಿದೆ ಎಂಬುದಕ್ಕೆ ಆದರಣೀಯ ತಂದೆಯ ಪ್ರತಿಭಾಶಾಲಿಯಾದ ಪುತ್ರನಾದ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್‌ರ ಹೆಸರೇ ಸಾಕಷ್ಟು ಖಾತರಿಪಡಿಸುತ್ತದೆ. ಹಝ್ರತ್ ಉಸ್ಮಾನ್‌ರ ಖಿಲಾಫತ್ ಕಾಲದ ಯಥಾರ್ಥ ಇಸ್ಲಾಮಿನ ಚರಿತ್ರೆಯನ್ನು ಓದಿದಷ್ಟು ಈ ಉಪನ್ಯಾಸವು ಗುಣಪಾಠವುಳ್ಳದ್ದು ಮತ್ತು ಅಮೂಲ್ಯವಾದುದೆಂದು ಗೊತ್ತಾಗುವುದು.

ಅವರ ಇನ್ನೊಂದು ಭಾಷಣ "ದೇವವಿಧಿ" (ತಖ್‌ದೀರೆ ಇಲಾಹಿ) ಎಂಬ ವಿಷಯದಲ್ಲಾಗಿತ್ತು. 1919ರ ಜಲ್ಸ ಸಾಲಾನದ ಸಂದರ್ಭದಲ್ಲಿ, ಖಾದಿಯಾನಿನ ಮಸ್ಜಿದ್ ನೂರ್‌ನಲ್ಲಿ ಈ ಭಾಷಣವನ್ನು ಅವರು ಮಾಡಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಈ ಭಾಷಣದ ಬಗ್ಗೆ ಹೇಳುತ್ತಾರೆ: ಈ ಭಾಷಣ ಏನಾಗಿತ್ತು. ಸಾಹಿತ್ಯಲೋಕದ ಒಂದು ಅತ್ಯುತ್ತಮ ರಚನೆಯಾಗಿತ್ತು. ದೇವವಿಧಿಯ ಪ್ರಾಮುಖ್ಯತೆ ಮತ್ತು ಅದರ ಬಗ್ಗೆ ಹಝ್ರತ್ ಪೈಗಂಬರ್(ಸ)ರ ಬೋಧನೆಗಳನ್ನು ಹೇಳಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವಿಷಯದ ಬಗ್ಗೆ ತನ್ನ ಅಭಿಪ್ರಾಯವನ್ನು ಹೀಗೆ ಹೇಳಿದರು: ದೇವವಿಧಿಯಲ್ಲಿ ಮತ್ತು ದೇವನ ಅಸ್ತಿತ್ವದಲ್ಲಿ ನಂಬಿಕೆಯಿರಿಸುವುದು ಎಂಬ ಎರಡು ವಿಷಯಗಳಿಗೆ ಪರಸ್ಪರ ಸಂಬಂಧವಿದೆ. ಅನಂತರ ಅವರು ದೇವವಿಧಿಯ ಬಗ್ಗೆಗಿನ ವಿವಾದಾಸ್ಪದ ದೃಷ್ಟಿಕೋನಗಳ ಬಗ್ಗೆ ಚರ್ಚಿಸಿಕೊಂಡು ಹಝ್ರತ್ ಪೈಗಂಬರ್(ಸ)ರ ಕೆಲವು ಹದೀಸ್‌ಗಳ ನಡುವೆ

ಇರುವ ವ್ಯತ್ಯಾಸವನ್ನು ಸರಿಹೊಂದಿಸಿ ಹೇಳಿದರು. ದೇವವಿಧಿಯ ವಿಷಯಗಳನ್ನು ಮನವರಿಕೆ ಮಾಡದಿರುವ ಕಾರಣದಿಂದ ಮನುಷ್ಯನಿಗೆ ಉಂಟಾದ ದೊಡ್ಡ ದೊಡ್ಡ ತಪ್ಪುಗಳ ಬಗ್ಗೆ ಅವರು ಪ್ರಸ್ತಾಪಿಸಿದರು. ವಹ್‌ದತುಲ್ ವಜೂದಿನ ವಿಶ್ವಾಸದ ತಪ್ಪುಗಳನ್ನು ವಿವರಿಸುತ್ತಾ ಪವಿತ್ರ ಖುರ್‌ಆನಿನ 6 ವಚನಗಳಿಂದ ಸೂಕ್ಷ್ಮ ಮತ್ತು ಅರ್ಥಪೂರ್ಣ ಪುರಾವೆಗಳನ್ನು ಮುಂದಿರಿಸಿಕೊಂಡು ಈ ವಿಶ್ವಾಸವನ್ನು ರದ್ದುಗೊಳಿಸಿದರು. ಅದರ ಮತ್ತೊಂದು ಎಲ್ಲೆಯನ್ನು ಸಹ ತಪ್ಪೆಂದು ಸಾಬೀತುಪಡಿಸಿದರು. ಅಲ್ಲಾಹನು ಏನೂ ಮಾಡಲು ಶಕ್ತನಲ್ಲ, ಎಲ್ಲವೂ ಯೋಜನೆ ಮತ್ತು ಪ್ರಯತ್ನದಿಂದ ಮಾತ್ರವೆಂಬ ಭಾವನೆಯನ್ನು ಸಹ ಪುರಾವೆಗಳ ಮೂಲಕ ಖಂಡಿಸಿದರು. ದೈವಿಕ ಜ್ಞಾನ ಮತ್ತು ದೈವಿಕ ವಿಧಿ ಇವೆರಡನ್ನು ಮಿಶ್ರ ಮಾಡಿದ ಕಾರಣದಿಂದ ಮನುಷ್ಯನ ಯೋಚನೆಗಳು ಮಾಡಿದ ತಪ್ಪುಗಳನ್ನು ಅತ್ಯಂತ ಉತ್ತಮ ರೀತಿಯಲ್ಲಿ ವಿಶ್ಲೇಷಣೆ ಮಾಡಿಕೊಂಡು ಈ ವಿಷಯವನ್ನು ಚೆನ್ನಾಗಿ ವಿವರಿಸಿದರು. ದೇವವಿಧಿಯ ಕುರಿತು ಹಳೆಯ ಮತ್ತು ಹೊಸ ಆಕ್ಷೇಪಗಳಿಗೆ ಉತ್ತರಗಳನ್ನು ಸಹ ಅದರಲ್ಲಿ ನೀಡಲಾಗಿದೆ. ದೇವವಿಧಿಯ ವಿಷಯವನ್ನು ಸರಿಯಾದ ಅರ್ಥದಲ್ಲಿ ಮನವರಿಕೆ ಮಾಡಿಕೊಂಡು ಅದರ ಆವಶ್ಯಕತೆಗಳನ್ನು ಈಡೇರಿಸುವುದರಿಂದ ಮನುಷ್ಯನಿಗೆ ಸಿಗಬಹುದಾದ ಏಳು ಆಧ್ಯಾತ್ಮಿಕ ಪದವಿಗಳನ್ನು ಸಹ ಪ್ರಸ್ತಾಪಿಸಿದರು.

**"ದೇವದೂತರು"** (ಮಲಾಯಿಕತುಲ್ಲಾಹ್) ಎಂಬ ವಿಷಯದಲ್ಲಿ 1920ರ ಡಿಸೆಂಬರ್ 28ರಂದು ಅವರು ಮತ್ತೊಂದು ಭಾಷಣ ಮಾಡಿದ್ದರು. ಮಸ್ಜಿದ್ ನೂರ್‌ನಲ್ಲಿ ಈ ಭಾಷಣವನ್ನು ಎರಡು ದಿನಗಳಲ್ಲಿ ಮುಕ್ತಾಯಗೊಳಿಸಲಾಯಿತು. ಪವಿತ್ರ ಖುರ್‌ಆನಿನ ಆಧಾರದಲ್ಲಿ ದೇವದೂತರ ನೈಜತೆ, ಆವಶ್ಯಕತೆ, ದೇವದೂತರ ವಿಧಗಳು, ಅವರ ಕರ್ತವ್ಯಗಳು ಮತ್ತು ಸೇವೆಗಳಲ್ಲದೆ, ದೇವದೂತರ ಅಸ್ತಿತ್ವದ ಬಗ್ಗೆ ಪುರಾವೆಗಳು, ಅವರ ಬಗ್ಗೆ ಇರುವ ಸಂಶಯಗಳು ಹಾಗೂ ಆರೋಪಗಳಿಗೆ ವಿಶದವಾದ ಮತ್ತು ಸಾಕ್ಷ್ಯಾಧಾರಿತ ಉತ್ತರಗಳನ್ನು ನೀಡಿದರು. ವಿಷಯದ ಕೊನೆಯಲ್ಲಿ, ದೇವದೂತರೊಂದಿಗೆ ಸಂಬಂಧ ಸ್ಥಾಪಿಸಲು ಮತ್ತು ಅವರಿಂದ ಪ್ರಯೋಜನ ಪಡೆಯುವಂತಾಗಲು ಎಂಟು ಮಾರ್ಗಗಳನ್ನು ಅವರು ಹೇಳಿಕೊಟ್ಟರು.

ದೇವನ ಅಸ್ತಿತ್ವದ ಬಗ್ಗೆ ಅವರು 1921ರಲ್ಲಿ ಒಂದು ಭಾಷಣವನ್ನು ನೀಡಿದ್ದರು. ಹಝ್ರತ್ ಮುಸ್ಲಿಹ್ ಮೌಊದ್[ರ] ತನ್ನ ಈ ಭಾಷಣದಲ್ಲಿ ದೇವನ ಅಸ್ತಿತ್ವದ ಬಗ್ಗೆ 8 ಸಾಕ್ಷ್ಯಾಧಾರಗಳು ಮತ್ತು ಅವುಗಳ ಬಗ್ಗೆ ಹೇಳಲಾಗುವ ಆರೋಪಗಳಿಗೆ ಉತ್ತರಗಳನ್ನು ನೀಡಿದರು. ಅಲ್ಲಾಹನ ಗುಣವೈಶಿಷ್ಟ್ಯಗಳಿಂದ ಅಲ್ಲಾಹನ ಅಸ್ತಿತ್ವದ ಪುರಾವೆಗಳನ್ನು ನೀಡಿದರು ಮತ್ತು ಅಲ್ಲಾಹನ ಗುಣವೈಶಿಷ್ಟ್ಯಗಳ ವಿಧಗಳನ್ನು ಸಹ ವಿವರಿಸಿದರು. ಅಲ್ಲಾಹನ ಬಗ್ಗೆ ಯುರೋಪಿನವರ, ಝುರತುಷ್ಟರ, ಹಿಂದುಗಳ ಮತ್ತು ಆರ್ಯರ ಭಾವನೆಗಳ ಎದುರಿಗೆ ಅಲ್ಲಾಹನ ಬಗ್ಗೆ ಇಸ್ಲಾಮಿನ ಅಧ್ಯಾಪನೆಗಳನ್ನು ವಿಶದವಾಗಿ ವಿವರಿಸಿದರು. ಅದಲ್ಲದೆ ಶಿರ್ಕ್‌ನ ವಿಧಗಳನ್ನು ಹೇಳುತ್ತಾ ಅವುಗಳನ್ನು ರದ್ದುಗೊಳಿಸಿದರು. ದೇವದರ್ಶನ, ಅದರ ಪದವಿಗಳು, ಅದರ ಸ್ಥಾನಗಳು, ಅದರ ಪ್ರಯೋಜನಗಳು, ಅದನ್ನು ಗಳಿಸುವ ರೀತಿ ಮತ್ತು ಮಾರ್ಗಗಳನ್ನು ಹೇಳಿದರು.

1921ರಲ್ಲಿ ಅವರು **"ವೇಲ್ಸ್ ರಾಜಕುಮಾರನಿಗೆ ಒಂದು ಕಾಣಿಕೆ"** ಎಂಬ ಹೆಸರಲ್ಲಿ ಒಂದು ಪುಸ್ತಕವನ್ನು ಬರೆದರು. ವೇಲ್ಸ್ ರಾಜಕುಮಾರ ಭಾರತಕ್ಕೆ ಬಂದಾಗ ಅವರಿಗೆ ಅದನ್ನು ನೀಡಲಾಯಿತು. ಈ ಸಂಕ್ಷಿಪ್ತ ಜ್ಞಾನಭರಿತ ಪುಸ್ತಕದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್[ರ] ಸರ್ಕಾರದೊಂದಿಗೆ ನಿಷ್ಠೆ ಮತ್ತು ಬದ್ಧತೆಯ ಬಗ್ಗೆ ಪ್ರಸ್ತಾಪಿಸಿದ್ದರಲ್ಲದೆ, ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಜೀವಿತ, ಅಹ್ಮದಿಯಾ ಜಮಾಅತಿನ ಅಧ್ಯಾಪನೆಗಳು, ಅದರ ಚರಿತ್ರೆ ಮತ್ತು ಅದರ ಸ್ಥಾಪನೆಯ ಉದ್ದೇಶವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಕೊನೆಗೆ ಹಝ್ರತ್ ಪೈಗಂಬರ್[ಸ]ರ ಚರ್ಯೆಯನ್ನು ಅನುಸರಿಸುತ್ತಾ ಬ್ರಿಟನಿನ ಸಿಂಹಾಸನ ಮತ್ತು ಕಿರೀಟದ ವಾರಸುದಾರರಿಗೆ ಇಸ್ಲಾಮಿನ ಸಂದೇಶವನ್ನು ಅತ್ಯಂತ ಪ್ರಭಾವಶಾಲಿ ರೀತಿಯಲ್ಲಿ ತಲುಪಿಸಿ ಅವರನ್ನು ಇಸ್ಲಾಮಿನ ಕಡೆಗೆ ಆಮಂತ್ರಿಸಿದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಮುಂದಿರಿಸಿದ ಈ ಕೊಡುಗೆಯನ್ನು ವೇಲ್ಸ್ ರಾಜಕುಮಾರ ಸ್ವೀಕರಿಸಿದರು. ತನ್ನ ಚೀಫ್ ಸೆಕ್ರಟರಿ ಮೂಲಕ ಅದಕ್ಕೆ ಕೃತಜ್ಞತೆಯನ್ನು ಸಹ ಸಲ್ಲಿಸಿದರು. ಪುಸ್ತಕಗಳನ್ನು ಓದುತ್ತಾ ಕೆಲವೆಡೆ ಅವರ ಮುಖ ಗುಲಾಬಿಯ ಹಾಗೆ ಕೆಂಪಾಗುತ್ತಿತ್ತು ಎಂದು ನಂತರ ಸಿಕ್ಕಿದ ಮಾಹಿತಿಗಳಿಂದ ತಿಳಿದುಬಂದಿತ್ತು. ಈ ಪುಸ್ತಕವನ್ನು ಓದುತ್ತಾ ರಾಜಕುಮಾರ ಒಂದೇ ಸವನೆ ಎದ್ದು ನಿಲ್ಲುತ್ತಿದ್ದರು ಎಂದು ಅವರ ಒಬ್ಬ ಸಹಾಯಿ ಹೇಳಿದ್ದರು. ಹೀಗೆ ಕೆಲವು ಕಾಲದ ನಂತರ ರಾಜಕುಮಾರನು ಕ್ರೈಸ್ತಧರ್ಮವನ್ನು ಉಪೇಕ್ಷಿಸಿದ್ದಾಗಿ ಸ್ಪಷ್ಟವಾಗಿ ಹೇಳಿದರು.

1924ರಲ್ಲಿ ವೆಂಬ್ಲೇ ಕಾನ್‌ಫರೆನ್ಸ್‌ನ ಸಂದರ್ಭದಲ್ಲಿ **"ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಂ"** ಎಂಬ ಹೆಸರಲ್ಲಿ ಒಂದು ಉಪನ್ಯಾಸವನ್ನು ಹಝ್ರತ್ ಮುಸ್ಲಿಹ್ ಮೌಊದ್[ರ] ಬರೆದಿದ್ದರು. ಅದರ ಸಾರಾಂಶವನ್ನು ಹಝ್ರತ್ ಮುಸ್ಲಿಹ್ ಮೌಊದ್[ರ] ಹಾಜರಿದ್ದ ಆ ಕಾನ್ಫರೆನ್ಸ್‌ನಲ್ಲಿ ಹಝ್ರತ್ ಚೌಧರಿ ಮುಹಮ್ಮದ್ ಝಫರುಲ್ಲಾಹ್ ಖಾನ್ ಸಾಹಿಬ್ ಓದಿ ಹೇಳಿದರು. ಈ ಲೆಕ್ಚರ್ ಎಷ್ಟು ವಿಶಿಷ್ಟ ಮತ್ತು ಅತುಲ್ಯವಾಗಿತ್ತು ಎಂದರೆ, ಕ್ರೈಸ್ತರ ದೊಡ್ಡ ದೊಡ್ಡ ನೇತಾರರು ಸಹ ಅನಿಯಂತ್ರಿತವಾಗಿ ಹೀಗೆ ಹೇಳಿದರು: ಈ ಉಪನ್ಯಾಸದಲ್ಲಿ ಹೇಳಲಾದ ಅಭಿಪ್ರಾಯಗಳು ಅದರ ಶಿಕ್ಷಣ, ಪುರಾವೆಗಳು, ಶ್ರೇಷ್ಠತೆ ಮತ್ತು ಸೌಂದರ್ಯದ ದೃಷ್ಟಿಯಲ್ಲಿ ವಿಶಿಷ್ಟ ಮತ್ತು ಅತುಲ್ಯವಾದುದಾಗಿದೆ.

(ಹುಝೂರ್ ಹೇಳಿದರು:) ಹೇಗಿದ್ದರೂ 18 ವಯಸ್ಸಿನಿಂದ 35 ವಯಸ್ಸಿನ ವರೆಗಿನ ಅವರ ಅರಿವು ಮತ್ತು ಪರಿಜ್ಞಾನದ ಮುತ್ತುಗಳ ಕೆಲವು ಮಿಂಚು ನೋಟವನ್ನು ಮಾತ್ರ ನಾನು ಇಲ್ಲಿ ತೋರಿಸಿದ್ದೇನೆ. ನಾನು ಇಲ್ಲಿ ಹೇಳಿದ ಸಂಗತಿಗಳು 17 ವರ್ಷಗಳ ಕಾಲಾವಧಿಯದ್ದಾಗಿವೆ. ಅವರು ವಿವರಿಸಿದ್ದ ಸಂಗತಿಗಳ ನೂರನೇ ಒಂದು ಅಂಶವನ್ನು ಕೂಡ ನನ್ನಿಂದ

ವಿವರಿಸಲು ಸಾಧ್ಯವಾಗಿಲ್ಲ. ಬಹುತೇಕ ಪ್ರಕಾಶನಗೊಂಡಿರುವ ಈ ಖಜಾನೆಗಳನ್ನು ಜಮಾಅತಿನ ವ್ಯಕ್ತಿಗಳು ಓದಬೇಕು. ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ – ಆಮೀನ್.

ಪಾಕಿಸ್ತಾನದ ಸ್ಥಿತಿಗತಿಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅಲ್ಲಿಯ ಜನರಿಗೂ ಶಾಂತಿ, ಸಮಾಧಾನ ಮತ್ತು ನೆಮ್ಮದಿಯ ಜೀವನವನ್ನು ಸಾಗಿಸಲು ಸೌಭಾಗ್ಯ ನೀಡಲಿ. ಎದುರಾಳಿಗಳ ಆಕ್ರಮಣಗಳು ಮತ್ತು ಕುತಂತ್ರಗಳನ್ನು ಅವನ ಕೃಪೆಯಿಂದ ನಾಶಮಾಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 19-02-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon